ಸಾಕ್ಷಿಗೆ ಪ್ರಮಾಣ ವಚನವನ್ನು ಬೋಧಿಸಿ ಪ್ರಮಾಣೀಕರಿಸಿದ

ದಿನಾಂಕಃ **23.03.2026**

ಮುಖ್ಯ ವಿಚಾರಣೆಃ ಪ್ರತಿವಾದಿ ಪರ ಶ್ರೀಮತಿ ಎಸ್ ಆರ್ ಫಾರ್ ಕೆ ಎಸ್ ಆರ್ ವಕೀಲರಿಂದ

ನಾನು ನನ್ನ ಮುಖ್ಯ ವಿಚಾರಣೆಯ ಬಾಬ್ತು ಪ್ರಮಾಣ ಪತ್ರ ಹಾಜರುಪಡಿಸಿದ್ದು, ಅದರಲ್ಲಿ ಬರೆದಿರುವುದು ಸತ್ಯವಿರುತ್ತದೆ. ನಾನೆ ಹೇಳಿ ಬರೆಸಿ ಸಹಿ ಮಾಡಿರುತ್ತೇನೆ.

**ಪ್ರತಿವಾದಿಯು ಈ ಕೆಳಗಿನ ದಾಖಲೆಗಳನ್ನು ಹಾಜರುಪಡಿಸಿದ್ದು ಅವುಗಳನ್ನು ಈ ಕೆಳಕಂಡಂತೆ ಗುರುತಿಸಲಾಯಿತು.**

1) ಅಥರೈಜೇಶನ್ ಲೆಟರನ್ನು ಹಾಜರುಪಡಿಸಿದ್ದು ಅದನ್ನು ನಿಡಿ 1 ಎಂದು ಗುರುತಿಸಲಾಯಿತು.

**ಪಾಟಿ ಸವಾಲುಃ ವಾದಿ ಪರ ಶ್ರೀಮತಿ ವಿ ಕೆ ವಕೀಲರಿಂದ**

1 ನೆ ವಾದಿಯು ನನ್ನ ಕಚೇರಿಯಲ್ಲಿ ಕೆಲಸ ಮಾಡುತ್ತಿದ್ದರು ಎಂದರೆ ಸರಿ . 1 ನೆ ವಾದದಿಯ ಸಲ್ಲಿಸಿರುವ ದಾಖಲಾತಿಗಳನ್ನು ಅವರ ಹೆಂಡತಿಯ ಹೆಸರಿನಲ್ಲಿ ಸಲ್ಲಿಸಿದ್ದು ಇತ್ತೀಚಿಗೆ ಅವರ ಹೆಂಡತಿಯ ಹೆಸರು ಅಲ್ಫೊನ್ಸಾ ಅಗಸ್ಟಿನ್ ಎಂದು ಬದಲಾಯಿಸಲು ಅರ್ಜಿಯನ್ನು ಕೊಟ್ಟಿರುತ್ತಾರೆ ಎಂದು ನುಡಿದರು. ದಿಃ 20.06.2023 ರಲ್ಲಿ 1 ನೆ ವಾದಿಯವರು 2 ನೆ ವಾದಿಯವರ ಹೆಸರು ತಪ್ಪಾಗಿದೆ ಎಂದು ಅರ್ಜಿ ಕೊಟ್ಟಿರುತ್ತಾರೆ ಎಂದರೆ ಸರಿ . ಅದಕ್ಕೆ ಏನಾದರೂ ಪ್ರತ್ಯುತರ ನೀಡಿದ್ದೀರಾ ಎಂದರೆ ಸಾಕ್ಷಿಯು ನಾವು

ನಮ್ಮ ಮೇಲಾಧಿಕಾರಿಗಳಿಗೆ ಸಲ್ಲಿಸಿದ್ದು ಅವರು ನ್ಯಾಯಾಲಯದಲ್ಲಿ ಸರಿಪಡಿಸಿಕೊಳ್ಳುವುದಾಗಿ ಪತ್ರದ ಮೂಲಕ ನಿರ್ದೇಶಿಸಿರುತ್ತಾರೆ ಎಂದು ನುಡಿದರು. ನಾವೆ 2 ನೆ ವಾದಿಯ ಹಸೆರನ್ನು ಬದಲಾಯಿಸಲು ತೊಂದರೆ ಇತ್ತಾ ಎಂದರೆ ಸಾಕ್ಷಿಯು ನ್ಯಾಯಾಲಯದಲ್ಲಿ ಸಾಬೀತು ಪಡಿಸಬೇಕು ಎಂದು ನುಡಿದರು. 2 ನೆ ವಾದಿಯ ಹೆಸರು ಅಲ್ಫೋನ್ಸಾ ಅಗಸ್ಟಿನ್ ಎಂದರೆ ಸಾಕ್ಷಿಯು ಆದಾರ ಕಾರ್ಡದಲ್ಲಿ ನಾವು ಸದರಿ ಹೆಸರನ್ನು ನೋಡಿದ್ದು ಆದರೆ ಅವರೆ 1 ನೆ ವಾದಿಯ ಹೆಂಡತಿ ಎಂದು ನಮಗೆ ತಿಳಿದುಕೊಳ್ಳಲು ಕಷ್ಟವಾದ ಕಾರಣೆ ನ್ಯಾಯಾಲಯದಲ್ಲಿ ಸಾಬೀತು ಪಡಿಸಲು ತಿಳಿಸಿರುತ್ತೇವೆ . ಬೀನಾ ಎಂಬ ಹೆಸರು ತಪ್ಪು ಎಂದರೆ ಸಾಕ್ಷಿಯು 1 ನೆ ವಾದಿಯೆ ಅವರ ಹೆಸರನ್ನು ಅವರ ಹೆಂಡತಿಯಾಗಿ ಕೊಟ್ಟಿರುತ್ತಾರೆ ಎಂದು ನುಡಿದರು. ಬೀನಾ ಮತ್ತು ಅಲ್ಫೋನ್ಸಾ ಅಗಸ್ಟಿನ್ ಒಬ್ಬರೇ ಆಗಿರುತ್ತಾರೆ ಎಂದರೆ ನಮಗೆ ಗೊತ್ತಿಲ್ಲ .

**ಮರು ವಿಚಾರಣೆ ಇಲ್ಲ.**

(ನನ್ನ ಉಕ್ತಲೇಖನದಂತೆ ತೆರೆದ ನ್ಯಾಯಾಲಯದಲ್ಲಿ ಬೆರಳಚ್ಚು ಮಾಡಲಾಗಿದೆ.)

ಓದಿ ಹೇಳಿ ಕೇಳಿ ಸರಿ ಇದೆ.

ಸಹಿ/–

ಸಿವಿಲ್ ನ್ಯಾಯಾಧೀಶರು,
ಕುಶಾಲನಗರ.